ಈ) ಇಲ್ಲ.

ಉ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು, 42 ಸ್ಥಳಗಳಲ್ಲಿ ಸರ್ಕಾರಿ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಪ್ರಸಾವನೆ ಬಂದಿರುತ್ತವೆ.

884 ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಪ್ರಾಥಮಿಕ, ಪ್ರೌಢಶಾಲೆ ಮತ್ತು ಸಂಯುಕ್ತ ಪ್ರೌಢಶಾಲೆಗಳಲ್ಲಿ ಕೊಠಡಿಗಳ ಕೊರತೆ ಇದೆಯೇ;

ಆ) ಇದ್ದಲ್ಲಿ, ಈ ಕೊಠಡಿಗಳ ಸಂಖ್ಯೆ ಎಷ್ಟು ಮತ್ತು ಯಾವ ಯಾವ ಹೋಬಳಿಯಲ್ಲಿ ಯಾವ ಯಾವ ಶಾಲೆಯಲ್ಲಿ ಕೊಠಡಿಗಳ ಕೊರತೆ ಇದೆ;

ಇ) ಹಾಗಿದ್ದಲ್ಲಿ, ಕೊಠಡಿಗಳ ಕೊರತೆ ನೀಗಿಸಲು ಸರ್ಕಾರವು ತಕ್ಷಣ ಕೈಗೊಂಡ ಕ್ರಮಗಳೇನು;

ಈ) ಈ ಶಾಲಾ ಕಟ್ಟಡಗಳ ಕಾಮಗಾರಿ ಅರ್ಧಕ್ಕೆ ನಿಂತುಹೋದ ಪ್ರಕರಣಗಳು ಯಾವುವು;

ಉ) ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು (ವಿವರ ನೀಡುವುದು)?

ಶ್ರೀ ಕಾಗೇರಿ ವಿಶ್ವೇಶ್ವರ ಹೆಗಡೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಇದೆ.

ಆ) 75 ಕೊಠಡಿಗಳ ಕೊರತೆ ಇರುತ್ತದೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಇ) ಕೊಠಡಿಗಳ ಕೊರತೆ ನೀಗಿಸಲು ಆರ್.ಐ.ಡಿ.ಎಫ್–15ರಡಿ ಅನುದಾನದ ಲಭ್ಯತೆಯನ್ನು ಆಧರಿಸಿ ಕ್ರಮ ವಹಿಸಲಾಗುವುದು.

ಈ) ಬಾರಿ ಕೈಸೇರು, ನೊಣಬೂರು, ಕಡ್ತೂರು, ಮಳಲಿಮಕ್ಕಿ, ರಾಮಕೃಷ್ಣಪುರ, ಮಂಡಗದ್ದೆ, ಕೋಡ್ಲು ಸರ್ಕಾರಿ ಪ್ರೌಢಶಾಲೆಗಳ ಹಾಗೂ ಮೇಗರವಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕಾಮಗಾರಿಗಳು ಅರ್ಧಕ್ಕೆ ನಿಂತಿರುತ್ತದೆ.

ಉ) ಸ.ಪ್ರೌ.ಶಾಲೆ ಬಾವಿ ಕೈ ಸೇರು: ಮಾಹಿತಿ ಸಿಂಧು ಯೋಜನೆಯಡಿ ಪ್ರಯೋಗಾಲಯ, ಕೊಠಡಿ ಮಂಜೂರಾಗಿತ್ತು. ಆದರೆ ತಾಂತ್ರಿಕ ತೊಂದರೆಗಳಿಂದಾಗಿ ಮಂಜೂರಾದ ಅನುದಾನವನ್ನು ನಿಗದಿತ ಅವಧಿಯಲ್ಲಿ ಖರ್ಚು ಮಾಡಲು ಸಾಧ್ಯವಾಗಲಿಲ್ಲ.

ಸ.ಪ್ರೌ.ಶಾಲೆ ನೊಣಬೂರು: ಜಿಲ್ಲಾ ಪಂಚಾಯತ್‌ನಿಂದ ತಳಪಾಯಕ್ಕೆ ಮಾತ್ರ ಅನುದಾನ ಮಂಜೂರಾಗಿದ್ದರಿಂದ ತಳಪಾಯ ಮುಗಿದಿರುತ್ತದೆ.

ಸ.ಪ್ರೌ.ಶಾಲೆ ಕಡತೂತು, ಮಳಲಿಮಕ್ಕಿ, ರಾಮಕೃಷ್ಣಪುರ, ಮಂಡಗದ್ದೆ, ಕೋಡ್ಲು, ಮತ್ತು ಮೇಗರವಳ್ಳಿ ಸ.ಪ.ಪೂ. ಕಾಲೇಜಿಗೆ ಆರ್.ಐ.ಡಿ.ಎಫ್-12ರಡಿ ಅನುದಾನ ಒದಗಿಸಿದ್ದು, 2009-10ನೇ ಸಾಲಿನಲ್ಲಿ ಕಾಮಗಾರಿ ಪೂರ್ಣಗೊಳ್ಳುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 884 ಕ್ಕೆ ಅನುಬಂಧ

ಕ್ರ. ಸಂ.	ಶಾಲೆಯ ಹೆಸರು	ಕೊರತೆ ಇರುವ ಕೊಠಡಿ
1	ಬಾಲಕರ ಸ.ಪ.ಪೂ.ಕಾಲೇಜು,ತೀರ್ಥಹಳ್ಳಿ	6
2	ಸ.ಪ.ಪೂ.ಕಾಲೇಜು,ಮೇಗರಹಳ್ಳಿ	1
3	ಸ.ಪ.ಪೂ.ಕಾಲೇಜು,ಮಾಳೂರು	3
4	ಸ.ಪ.ಪೂ.ಕಾಲೇಜು,ಬಸವಾನಿ	3
5	ಸ.ಪ್ರೌ.ಶಾ.ಅರಗ	2
6	ಸ.ಪ್ರೌ.ಶಾ.ಮಳಲಿಮಕ್ಕಿ	3
7	ಬಾಲಕಿಯರ ಸ.ಪ.ಪೂ.ಕಾಲೇಜು,ತೀರ್ಥಹಳ್ಳಿ	2
8	ಸ.ಪ್ರೌ.ಶಾ.ಮತ್ತಿಗಾರು	4
9	ಸ.ಪ್ರೌ.ಶಾ.ಕನ್ನಂಗಿ	2
10	ಸ.ಪ್ರೌ.ಶಾ.ತೂದೂರು	4
11	ಸ.ಪ್ರೌ.ಶಾ.ತನಿಕಲ್	5
12	ಸ.ಪ್ರೌ.ಶಾ.ಶಾಲ್ಕುಡುಮಲ್ಲಿಗೆ	3
13	ಸ.ಪ್ರೌ.ಶಾ.ಕೊಣಂದೂರು	5
14	ಸ.ಪ್ರೌ.ಶಾ.ನೊಣಬೂರು	3
15	ಸ.ಪ್ರೌ.ಶಾ.ಬಿಳಲುಕೊಪ್ಪ	8
16	ಸ.ಪ್ರೌ.ಶಾ.ಕಟ್ಟೆಹಕ್ಕಲು	1
17	ಸ.ಪ್ರೌ.ಶಾ.ಹೆದ್ದೂರು	2
18	ಸ.ಪ್ರೌ.ಶಾ.ರಾಮಕೃಷ್ಣಪುರ	2
19	ಸ.ಪ್ರೌ.ಶಾ.ಕೋಡ್ಲು	2
20	ಸ.ಪ್ರೌ.ಶಾ.ಕೊಂಡ್ಕೂರು	2
21	ಸ.ಪ್ರೌ.ಶಾ.ಕಡ್ತೂರು	2

22	ಸ.ಪ್ರೌ.ಶಾ.ಬಾವಿಕೈಸರು	2
23	ಸ.ಪ್ರೌ.ಶಾ.ಗುಡ್ಡೆಕೊಪ್ಪ	4
24	ಸ.ಪ್ರೌ.ಶಾ.ಹುಂಚದಕಟ್ಟೆ	4
	ಒಟ್ಟು	75

889 ಶ್ರೀ ರಾಮಚಂದ್ರ ಎಸ್.ವಿ.(ಜಗಳೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಾವಣಗೆರೆ ಜಿಲ್ಲೆಯ ವಿವಿಧ ಕ್ಷೇತ್ರಗಳ ರಸ್ತೆ ಕಾಮಗಾರಿಗೆ ಕ್ಷೇತ್ರವಾರು ಬಿಡುಗಡೆ ಮಾಡಿರುವ ಹಣ ಎಷ್ಟು;

ಆ) ವಿವಿಧ ಕ್ಷೇತ್ರಗಳಲ್ಲಿರುವ ಜಿಲ್ಲಾ ರಸ್ತೆ, ಗ್ರಾಮೀಣ ರಸ್ತೆಗಳು ಎಷ್ಟು ಕಿ.ಮೀ.ಗಳಿವೆ (ವಿವರ ನೀಡುವುದು);

ಇ) ವಿವಿಧಕ್ಷೇತ್ರ/ತಾಲ್ಲೂಕುಗಳಿಗೆ ಬಿಡುಗಡೆ ಮಾಡಿರುವ ರಸ್ತೆ ಅಭಿವೃದ್ಧಿ ನಿಧಿಯಲ್ಲಿ ತಾರತಮ್ಯಕ್ಕೆ ಕಾರಣಗಳೇನು;

ಈ) ತಾರತಮ್ಯವಾಗಿದ್ದಲ್ಲಿ ಸರಿಪಡಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಕು. ಶೋಭಾ ಕರಂದ್ಲಾಜೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) :

ಅ) ದಾವಣಗೆರೆ ಜಿಲ್ಲೆಯ ವಿವಿಧ ಮತಕ್ಷೇತ್ರಗಳಿಗೆ ರಸ್ತೆ ಕಾಮಗಾರಿಗಳಿಗೆ ವಿವಿಧ ಲೆಕ್ಕಶೀರ್ಷಿಕೆಯಡಿ ಬಿಡುಗಡೆ ಮಾಡಿದ ಅನುದಾನ ವಿವರ ಕೆಳಕಂಡಂತಿದೆ.

ಕ್ರ ಸಂ.	ಕ್ಷೇತ್ರದ ಹೆಸರು	ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ (3054)	ಗ್ರಾಮೀಣ ಸಂಪರ್ಕ ರಸ್ತೆ ಯೋಜನೆ (5054)	12ನೇ ಹಣಕಾಸು ಯೋಜನೆ
1	ದಾವಣಗೆರೆ	41.90	128.32	50.90
2	ಮಾಯಕೊಂಡ	30.00	42.95	27.05
3	ಹರಿಹರ	95.05	74.47	54.72
4	ಹೊನ್ನಾಳಿ	121.75	133.97	105.45
5	ಚನ್ನಗಿರಿ	191.18	60.67	107.99